


'ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ'ದ ಹಿಂದಿನ ನಿರ್ದೇಶಕರಾಗಿದ್ದ, 'ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ'ದ ಹಿರಿಯ ಸಲಹೆಗಾರ ಡಾ. ಜಿ.ಎಸ್. ಶ್ರೀನಿವಾಸ್ ರೆಡ್ಡಿ ಅವರು ರಾಜ್ಯದ ಹಲವು ಪ್ರಕೃತಿ ವಿಕೋಪಗಳಿಗೆ ಸಾಕ್ಷಿಯಾದವರು. ಪರಿಹಾರ ಕಾರ್ಯಾಚರಣೆಗಳ ಉಸ್ತುವಾರಿಯನ್ನೂ ವಹಿಸಿದ ಅನುಭವ ಹೊಂದಿದವರು. ಬರ, ಪ್ರವಾಹ, ಗುಡ್ಡ ಕುಸಿತ, ಕಡಲ್ಕೊರೆತ ಎಲ್ಲ ರೀತಿಯ ಅವಘಡಗಳು ಸಂಭವಿಸಿದಾಗಲೂ ನೆರವಿಗೆ ಧಾವಿಸಿದ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವನ್ನು ಮುನ್ನಡೆಸಿದವರು. ರಾಜ್ಯದಲ್ಲಿ ಪದೇ ಪದೇ ಸಂಭವಿಸುತ್ತಿರುವ ಪ್ರಕೃತಿ ವಿಕೋಪಗಳ ಕುರಿತು ಅವರೊಂದಿಗೆ 'ಸುಧಾ' ನಡೆಸಿದ ಸಂವಾದ ಇಲ್ಲಿದೆ.

**◆ ರಾಜ್ಯದ ಇತ್ತೀಚಿನ ವರ್ಷಗಳ ಪರಿಸ್ಥಿತಿಯನ್ನು ನೋಡಿದರೆ ಮಳೆಚಕ್ರ ದಿಕ್ಕು ತಪ್ಪಿದೆ ಎಂದೆನಿಸುವುದಲ್ಲವೇ? ಈ ಬೆಳವಣಿಗೆಗೆ ಕಾರಣವಾದ ಅಂಶಗಳೇನು?**

ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದಿಂದ ನಾವು ಈಚೆಗೆ ಒಂದು ಅಧ್ಯಯನ ನಡೆಸಿದೆವು. ಕಳೆದ 60 ವರ್ಷಗಳಲ್ಲಿ ಮಳೆ ಸುರಿಯುವ ಪ್ರಮಾಣದಲ್ಲಿ ಏನೆಲ್ಲ ಬದಲಾವಣೆಗಳು ಆಗಿವೆ ಎನ್ನುವುದನ್ನು ತಿಳಿಯುವುದೇ ಈ ಅಧ್ಯಯನದ ಉದ್ದೇಶವಾಗಿತ್ತು. ಮಳೆಚಕ್ರ ದಿಕ್ಕು ತಪ್ಪುತ್ತಿರುವುದು ಈ ಅಧ್ಯಯನದಲ್ಲಿ ಎದ್ದು ಕಂಡಿದೆ. 1960ರಿಂದ 1990 (ಪಿ–1) ಹಾಗೂ 1990ರಿಂದ 2020ರ (ಪಿ–2) ಎರಡು ಅವಧಿಗಳಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ. ಮಳೆ ಸುರಿಯುವ ಪ್ರಮಾಣ, ಮಳೆ ದಿನಗಳ ಪ್ರಮಾಣದಲ್ಲಿ ತುಂಬಾ ವ್ಯತ್ಯಾಸಗಳಾಗಿವೆ. ದಕ್ಷಿಣ ಒಳನಾಡು ಹಾಗೂ ಮಲೆನಾಡು ಪ್ರದೇಶದಲ್ಲಿ ಪಿ–1ಗೆ ಹೋಲಿಸಿದರೆ ಪಿ–2ನಲ್ಲಿ ಮಳೆ ಪ್ರಮಾಣ ಹೆಚ್ಚಾಗಿದೆ. ಚಿತ್ರದುರ್ಗ ಜಿಲ್ಲೆ ಸಹ ಮೊದಲಿಗಿಂತ ಹೆಚ್ಚು ಮಳೆ ಕಾಣುತ್ತಿದೆ. ಇದೇ ಅವಧಿಯಲ್ಲಿ ಉತ್ತರ ಒಳನಾಡು ಕರಾವಳಿ ಮತ್ತು ಕೊಡಗಿನಲ್ಲಿ ಮಳೆ ಪ್ರಮಾಣ ಸ್ವಲ್ಪ ಕಡಿಮೆಯಾಗಿದೆ.

ನಮ್ಮ ರಾಜ್ಯದಲ್ಲಿ ಲಾಗಾಯ್ತಿನಿಂದಲೂ ಜುಲೈ ತಿಂಗಳಲ್ಲಿ ಮಳೆ ಪ್ರಮಾಣ ಹೆಚ್ಚಾಗಿರುತ್ತಿತ್ತು. ಆದ್ದರಿಂದಲೇ ಜೂನ್ ತಿಂಗಳಲ್ಲಿ ಬಿತ್ತನೆ ಚಟುವಟಿಕೆಗಳು ನಡೆಯುತ್ತಿದ್ದವು. ಆದರೆ, ಕಳೆದ ಮೂರು ವರ್ಷಗಳಿಂದ ಇನ್ನೂ ಒಂದು ವಿಶೇಷ ಘಟಿಸುತ್ತಿದೆ. ಜುಲೈ ತಿಂಗಳ ವಾಡಿಕೆ ಮಳೆಗಿಂತ ಶೇ 60ರಷ್ಟು ಕಡಿಮೆ ಮಳೆಯನ್ನು ನಮ್ಮ ರಾಜ್ಯ ಕಾಣುತ್ತಿದೆ. ಮೂವತ್ತು ವರ್ಷಗಳ ಹಿಂದಿನ ಸ್ಥಿತಿಗೆ ಹೋಲಿಸಿದರೆ ಮಳೆ ಚಕ್ರದಲ್ಲಿ ಭಾರೀ ಬದಲಾವಣೆಗಳು ಆಗಿವೆ. ಅದಕ್ಕೆ ತಕ್ಕಂತೆ ನಮ್ಮ ಯೋಜನೆಗಳು ಸಹ ಈಗ ಬದಲಾಗಬೇಕಿದೆ.

**◆ ಹಾಗಾದರೆ ಹವಾಮಾನ ಬದಲಾವಣೆಯ ಪರಿಣಾಮಗಳು ಈಗ ನಮ್ಮ ರಾಜ್ಯದಲ್ಲೂ ಢಾಳಾಗಿ ಕಾಣಿಸಿಕೊಳ್ಳುತ್ತಿವೆ ಎಂದಾಯಿತು, ಅಲ್ಲವೇ?**

ಖಂಡಿತವಾಗಿಯೂ ಹೌದು. ಹವಾಮಾನ ಬದಲಾವಣೆಯನ್ನು ನಾವು ಜಾಗತಿಕ ಮಟ್ಟದಲ್ಲಿ ಯೋಚಿಸಿದರೆ ಏನೂ ಪ್ರಯೋಜನವಿಲ್ಲ. ಸ್ಥಳೀಯ ಮಟ್ಟದಲ್ಲಿ ಹವಾಮಾನ ಬದಲಾವಣೆಯ ಪರಿಣಾಮಗಳೇನು ಎನ್ನುವುದನ್ನು ತಿಳಿದುಕೊಳ್ಳುವುದು ತುಂಬಾ ಮುಖ್ಯ. ಸ್ಥಳೀಯ ಮಟ್ಟದ ಹವಾಮಾನ ಬದಲಾವಣೆ ಹಾಗೂ ಅದರ ಪರಿಣಾಮಗಳ ಕುರಿತು ನಮ್ಮ ಕೇಂದ್ರವು ಅಧ್ಯಯನ ನಡೆಸಿದ್ದು 'ಕರ್ನಾಟಕದಲ್ಲಿ ಹವಾಮಾನ ಬದಲಾವಣೆಯ ಪರಿಣಾಮಗಳು' ಎಂಬ ವರದಿಯನ್ನೂ ಪ್ರಕಟಿಸಿದೆ. ತಾಲ್ಲೂಕು ಮಟ್ಟದಲ್ಲಿ ಹವಾಮಾನ ಬದಲಾವಣೆಗಳ ಹೊಳಹುಗಳನ್ನು ಈ ವರದಿ ನೀಡುತ್ತದೆ. ಕಳೆದ ಮೂರು ವರ್ಷಗಳಿಂದ ಜುಲೈ ತಿಂಗಳಲ್ಲಿ ನಿರಂತರವಾಗಿ ಮಳೆ ಪ್ರಮಾಣ ಕಡಿಮೆ ಆಗುತ್ತಿರುವುದರಿಂದ ಬೆಳೆ ಪದ್ಧತಿಯಲ್ಲೂ ಬದಲಾವಣೆ ಮಾಡಿಕೊಳ್ಳುವುದು ಅಗತ್ಯವಾಗಿದೆ. ಮುಂದಿನ ದಿನಗಳಲ್ಲಿ ಬಿತ್ತನೆ ಅವಧಿಯಲ್ಲೂ ಬದಲಾವಣೆ ಮಾಡಿಕೊಳ್ಳುವ ಅಗತ್ಯ ಬರಲಿದೆ.

**◆ ಅಣೆಕಟ್ಟುಗಳು ವಿಪತ್ತನ್ನು ತಂದಿವೆಯೇ?**

ಅಣೆಕಟ್ಟುಗಳು ಇಲ್ಲದಿದ್ದ ಪರಿಸ್ಥಿತಿಯನ್ನು ಒಮ್ಮೆ ಊಹಿಸಿಕೊಂಡು ನೋಡಿ. ಸುಮ್ಮನೇ ದೂರಿ ಪ್ರಯೋಜನವಿಲ್ಲ. ಆದರೆ, ಅವುಗಳ ನಿರ್ವಹಣೆಯಲ್ಲಿ ಇರುವ ಲೋಪದೋಷಗಳನ್ನು (ಉದಾಹರಣೆಗೆ ಹೂಳು ತುಂಬದಂತೆ ನೋಡಿಕೊಳ್ಳುವುದು) ಸರಿಪಡಿಸಿಕೊಳ್ಳುವುದು ಅಗತ್ಯವಾಗಿದೆ.

**◆ ಮಳೆ ವಿಪತ್ತುಗಳು ಈಗೀಗ ವಾರ್ಷಿಕ ವಿದ್ಯಮಾನಗಳಾಗುತ್ತಿವೆ. ಇದಕ್ಕೆ ಏನು ಕಾರಣ?**

ಮುಂಗಾರಿನ ಅವಧಿಯಲ್ಲಿ ಹಲವು ದಿನಗಳವರೆಗೆ ಹರಿದು ಹಂಚಿಹೋಗಬೇಕಿದ್ದ ಮಳೆ, ಒಂದೇ ವಾರ – ಅದರಲ್ಲೂ ಒಂದೆರಡು ದಿನಗಳಲ್ಲಿಯೇ– ಸುರಿಯುತ್ತಿದೆ. ಮಳೆ ವಿಕೋಪಗಳಿಗೆ ಇದೇ ಮುಖ್ಯ ಕಾರಣ. ಹಾಗೆ ನೋಡಿದರೆ ಪಶ್ಚಿಮ ಘಟ್ಟದಲ್ಲಿ ಕಳೆದ ತಿಂಗಳವರೆಗೆ ವಾಡಿಕೆ ಮಳೆಗಿಂತ ಶೇ 37ರಷ್ಟು ಕಡಿಮೆ ಮಳೆ ಸುರಿದಿತ್ತು. ಹಾಗೆಯೇ ಕೊಡಗು ಸಹ ಶೇ 41ರಷ್ಟು ಮಳೆ ಕೊರತೆಯನ್ನು ಎದುರಿಸಿತ್ತು. ಎರಡು ತಿಂಗಳಲ್ಲಿ ಸುರಿಯಬೇಕಿದ್ದ ಮಳೆ ನಾಲ್ಕು ದಿನಗಳಲ್ಲಿ ಸುರಿದಿದೆ. ವಿಪತ್ತಿನ ಸನ್ನಿವೇಶಕ್ಕೆ ಅದು ಕಾರಣವಾಗಿದೆ. ಪ್ರವಾಹವನ್ನು ಸಂಪನ್ಮೂಲವನ್ನಾಗಿಯೂ ನೋಡಿ, ಬಳಸಿಕೊಳ್ಳುವ ಪ್ರಯತ್ನ ಮಾಡಬೇಕು.

**◆ ಕೊಡಗಿನ ಗುಡ್ಡ ಕುಸಿತದಂತಹ ದುರಂತಗಳಿಗೆ ಮಳೆಯೊಂದೇ ಕಾರಣವೇ?**

ಮಳೆಯೊಟ್ಟಿಗೆ ಕೊಡಗಿನ ಭೂವಿನ್ಯಾಸವೂ ಗುಡ್ಡ ಕುಸಿತದ ಘಟನೆಗಳಿಗೆ ಕಾರಣ. ಕೊಡಗಿನಲ್ಲಿ ಬಹುತೇಕ ಗುಡ್ಡಗಳು ಒಂದೂವರೆ ಮೀಟರ್‌ಗಿಂತಲೂ ಹೆಚ್ಚು